ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Friday the 6th February, 1981 / Magha 17, 1902 S.E.

The House met in the Assembly Chamber, Vidhana Soudha, at Thirty minutes past Eleven of the Clock.

[MR. SPEAKER (SRI K.H. RANGANATH) in the Chair]

REPRESENTATIONS BY MEMBERS.

ಶ್ರೀ ಎ.ಜಿ. ಕೊಡಗಿ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಬಹಳ ಪ್ರಾಮುಖ್ಯವುಳ್ಳ ಪ್ರಶ್ನೆಗಳನ್ನು ನಾನು ಒಂದು ತಿಂಗಳ ಹಿಂದೆಯೇ ಉತ್ತರಗಳಿಗಾಗಿ ಕಳುಹಿಸಿದ್ದೆ. ಆದರೆ, ಅದರಲ್ಲಿ ಒಂದಕ್ಕೂ ಕೂಡ ಇನ್ನೂ ಉತ್ತರ ಬಂದಿಲ್ಲ. ಈ ಅಧಿವೇಶನ ಮುಕ್ತಾಯದ ಹಂತದಲ್ಲಿರುವಾಗ ನನ್ನ ಪ್ರಶ್ನೆಗಳಿಗೊಂದಕ್ಕೂ ಉತ್ತರ ಬಂದಿಲ್ಲವೆಂದರೆ ಹೇಗೆ?

ಅಧ್ಯಕ್ಷರು.—ನಾನು ಈಗಾಗಲೇ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಸರ್ಕಾರಕ್ಕೆ ಪತ್ರ ಬರೆದು ಉತ್ತರಗಳು ಬೇಗ ಬರುವ ಹಾಗೆ ನಾನು ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎ.ಜಿ. ಕೊಡಗಿ.—ತಾವು ಮಾಡಿದ್ದೀರಿ.....

ಅಧ್ಯಕ್ಷರು.—ಈಗಲೂ ಕೂಡ ಮಾಡುತ್ತೇನೆ. ಮಾನ್ಯ ಸದಸ್ಯರುಗಳಿಂದ ಇನ್ನು ಮುಂದೆ ದೂರುಗಳು ಬರದ ಹಾಗೆ ನಾನು ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎ.ಜಿ. ಕೊಡಗಿ.—ತಾವು ಮಾಡಿದ್ದೀರಿ ಮತ್ತು ಮಾಡುತ್ತಿದ್ದೀರಿ. ತಮ್ಮ ಬಗ್ಗೆ ನಮಗೆ ಗೌರವವಿದೆ. ಆದರೆ, ಸರ್ಕಾರದವರು ಇಲ್ಲಿ ನೇರವಾಗಿ ಹೇಳಬೇಕು.

ಅಧ್ಯಕ್ಷರು.—ಈ ಸಭೆಯಲ್ಲಿ ಅವರು ಹೇಳತಕ್ಕದ್ದಲ್ಲ. ಇದು ನನ್ನ ಕಛೇರಿಗೂ ಮತ್ತು ಸರ್ಕಾರಕ್ಕೂ ಇರುವ ಸಂಬಂಧ. ತಮಗೆ ಉತ್ತರಗಳನ್ನು ಒದಗಿಸಿದರಾಯಿತಲ್ಲವೆ? ಇನ್ನು ಮುಂದೆ ಮಾನ್ಯ ಸದಸ್ಯರುಗಳಿಂದ ಈ ಬಗ್ಗೆ ದೂರಿಗೆ ಅವಕಾಶವಿಲ್ಲದ ರೀತಿಯಲ್ಲಿ ಉತ್ತರಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ, ಈ ಸದನದ ನಿಯಮಾವಳಿಗಳೂ ಸ್ವಲ್ಪ ಬದಲಾವಣೆಯಾಗಬೇಕಾಗಿದೆ. ಆದನ್ನು ಬದಲಾವಣೆ ಮಾಡುವುದಕ್ಕಾಗಿ ಈ ಸದನದ ಸಮಿತಿ ಕೂಡ ನೇಮಕವಾಗಿದೆ. ಆದುದರಿಂದ. ನಾವು ಸಭೆ ಸೇರಿ ಬದಲಾವಣೆ ಏನು ಮಾಡಬೇಕೆಂಬುದನ್ನು ತೀರ್ಮಾನ ಮಾಡಿಕೊಂಡು, ಅದನ್ನು ಜಾರಿಗೆ ತರುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.....

ಶ್ರೀ ಎ.ಜಿ. ಕೊಡಗಿ.—ಮಾನ್ಯ ಅಧ್ಯಕ್ಷರೇ, ಬಸ್ ದರ ಏರಿಕೆ ಕುರಿತು ನಾನು ಪ್ರಾಮುಖ್ಯವಾದ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆನು. ಅದಕ್ಕೆ ಉತ್ತರ ಇಲ್ಲಿಯು ತನಕ ಬಂದಿಲ್ಲ. ಈ ಅಧಿವೇಶನ ಎಂದು ಮುಗಿಯುವುದೋ ನನಗೆ ಗೊತ್ತಿಲ್ಲ. ಅಂತೂ ನಾವು ಹೋಗುವುದರೊಳಗೆ ಆ ವಿಷಯದ ಬಗ್ಗೆ ಚರ್ಚೆ ಮಾಡುವುದು ಸೂಕ್ತವೆಂದು ನಾನು ತಿಳಿದುಕೊಂಡಿದ್ದೇನೆ.....

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಅಧ್ಯಕ್ಷರೇ, ತಮ್ಮ ಕಳಕಳಿಯ ಬಗ್ಗೆ ನಮಗೆ ಅಪಾರ ನಂಬಿಕೆ ಇದೆ. ನಮಗೆ ಸಂತೋಷವೂ ಆಗಿದೆ. ನಾವು ಇದನ್ನು ಏತಕ್ಕೆ ಹೇಳುತ್ತಿದ್ದೇವೆಂದರೆ, ತಾವು ಇಷ್ಟು ಹೇಳಿದರೂ, ಕಡತ ಯಜ್ಞ ಮಾಡಿದ ಸರ್ಕಾರ ಇದನ್ನೆಲ್ಲ ಏತಕ್ಕೆ ಮಾಡುತ್ತಿಲ್ಲವೆಂದು ಹೇಳುತ್ತಿದ್ದೇನೆ.